JOINT DIRECTOR TOWN PLANNING (NORTH)
No. CC/17/22-23
Date: 30-11-22.
Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಸಂಖ್ಯೆ: BBMP/Addl.Dir/JD NORTH/LP/0191/2015-16 ದಿನಾಂಕ: 30-11-22.

## ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ)

ವಿಷಯ: ಆಸ್ತಿ ಸಂಖ್ಯೆ: 239/240/275/88/1, 240/276/88/1, 240/276/89/1, ಬ್ಯಾಟರಾಯನಪುರ ಗ್ರಾಮದ ಸರ್ವೆ ನಂ. 88/1ಪಿ ಮತ್ತು ಇತರೆ ರಲ್ಲಿ, ಬ್ಯಾಟರಾಯನಪುರ ಗ್ರಾಮ, ಬ್ಯಾಟರಾಯನಪುರ ಉಪ–ವಿಭಾಗ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ, ವಾರ್ಡ್ ನಂ. 07, ಯಲಹಂಕ ವಲಯ, ಬೆಂಗಳೂರು ರ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ಬ್ಲಾಕ್ –3ಆರ್ ರಲ್ಲಿ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ) ಉಪಯೋಗದ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ಪರಿಷ್ಕೃತ ನಕ್ಷೆ ಮಂಜೂರಾತಿ ಸಂಖ್ಯೆ:BBMP/ Addl.Dir/JDNORTH/ LP/0191/2015-16 ರಂತೆ ದಿನಾಂಕ: 14-02-2019

2) ತಮ್ಮ ಮನವಿ ಪತ್ರ ದಿನಾಂಕ: 06-08-2022

* * * * * * *

ಆಸ್ತಿ ಖಾತಾ ಸಂಖ್ಯೆ: 239/240/275/88/1, 240/276/88/1, 240/276/89/1, ಬ್ಯಾಟರಾಯನಪುರ ಗ್ರಾಮದ ಸರ್ವೆ ನಂ. 88/1ಪಿ ಮತ್ತು ಇತರೆ ರಲ್ಲಿ, ಬ್ಯಾಟರಾಯನಪುರ ಗ್ರಾಮ, ಬ್ಯಾಟರಾಯನಪುರ ಉಪ–ವಿಭಾಗ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ, ವಾರ್ಡ್ ನಂ. 07, ಯಲಹಂಕ ವಲಯ, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ ಬ್ಲಾಕ್ –3ಆರ್ ರಲ್ಲಿನ ಟವರ್ – 26 ರಿಂದ 35 ರಲ್ಲಿ 02 ಸಾಮಾನ್ಯ ತಳ ಮಹಡಿಯನ್ನೊಳಗೊಂಡಂತೆ ನೆಲ + ಮೇಲಿನ 14 ಅಂತಸ್ತುಗಳು 566 ಘಟಕಗಳುಳ್ಳ ವಸತಿ ಸಮುಚ್ಚಯ ನಿರ್ಮಿಸಲು ಈ ಕಛೇರಿಯಿಂದ ಉಲ್ಲೇಖ (1) ರಂತೆ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಪ್ರಸ್ತುತ ಸದರಿ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ, ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಬ್ಲಾಕ್ – 3ಆರ್ ರಲ್ಲಿ ಮಂಜೂರಾತಿ ಪಡೆದಿರುವ ಟವರ್ – 26 ರಿಂದ 35 ರ ಪೈಕಿ ಮೂರು ಟವರ್‌ಗಳಾದ – 26, 34 & 35 ಹೊರತುಪಡಿಸಿ ಇನ್ನುಳಿದ ಟವರ್ – 27, 28, 29, 30, 31 32 & 33 ಗಳ ಕಾಮಗಾರಿಯನ್ನು ಪರಿಷ್ಕೃತ ಮಂಜೂರಾತಿ ನಕ್ಷೆಯನ್ವಯ ಅಗತ್ಯ ನಡುಜಾಗಗಳನ್ನು ಬಿಟ್ಟು ನಿರ್ಮಿಸುತ್ತಿರುವುದನ್ನು ಪರಿವೀಕ್ಷಿಸಲಾಗಿದೆ.

ಅಪರ ನಿರ್ದೇಶಕರು ನಗರ ಯೋಜನೆ ರವರು ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ) ನೀಡುವ ಪ್ರಸ್ತಾವನೆಗೆ ದಿನಾಂಕ: 23–11–2022 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಸಂಬಂಧ ಶುಲ್ಕ ರೂ. 8,18,000/– ಗಳಿಗೆ ಡಿ.ಡಿಯನ್ನು ಸಲ್ಲಿಸಿದ್ದು, ಈ ಕಛೇರಿಯ ರಶೀದಿ ಸಂಖ್ಯೆ: RE-ifms331-TP/000103 ದಿನಾಂಕ: 29–11–2022 ರಂತೆ ಪಾಲಿಕೆಗೆ ಸಂದಾಯ ಮಾಡಿರುವುದರಿಂದ, ಸದರಿ ಬ್ಲಾಕ್ –3ಆರ್ ರಲ್ಲಿನ ಟವರ್ –27, 28, 29, 30, 31 32 & 33 ವಸತಿ ಸಮುಚ್ಚಯ ಕಟ್ಟಡದ ಭಾಗಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ.

### ಷರತ್ತುಗಳು

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

3. ಮಂಜೂರಾತಿಯ ಸಿಂಧುತ್ವವು ಉಲ್ಲೇಖ (1) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

5. ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ ಹೊಣೆಯಾಗಿರುತ್ತಾರೆ ತಪ್ಪಿದ್ದಲ್ಲಿ ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.

6. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ಕ್ಕೆ ಬದ್ಧವಾಗಿರತಕ್ಕದ್ದು.

7. ಕಟ್ಟಡದಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯವನ್ನು ಸಂಪೂರ್ಣವಾಗಿ ಸಂಸ್ಕರಿಸಿ ಬಳಸಿಕೊಳ್ಳುವಂತಹ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ ಅದನ್ನು ನಿರ್ವಹಿಸುವ ಮುಖಾಂತರ Zero Waste Discharge ಮಾಡಲು ಕ್ರಮಕೈಗೊಳ್ಳುವುದು.

8. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.

9. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಳಸಿಕೊಳ್ಳುವುದು.

10. ಪರಿಷ್ಕೃತ ನಕ್ಷೆ ಮಂಜೂರಾತಿ ನಕ್ಷೆಯನುಸಾರ ಇನ್ನುಳಿದ ಟವರ್‌ಗಳ ಕಾಮಗಾರಿಯನ್ನು ಪ್ರಾರಂಭಿಸಿ ಈ ಕಛೇರಿಯಿಂಧ ಪ್ರಾರಂಭಿಕ ಪ್ರಮಾಣಪತ್ರ ಪಡೆಯತಕ್ಕದ್ದು.

ಸಹಿ /-

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

ಮೆ: ಲಾರ್ಸನ್ ಅಂಡ್ ಟ್ಯುಬ್ರೊ ಕನ್‌ಸ್ಟ್ರಕ್ಷನ್ ಎಕ್ವಿಪ್‌ಮೆಂಟ್ ಲಿ.,
ರವರ ಪರವಾಗಿ ಶ್ರೀ.ನಿಶಿಕಾಮತ್ ಶಂಪಿ,
# 38, ಕಬ್ಬನ್ ರಸ್ತೆ, ಬೆಂಗಳೂರು – 560 001.

ಪ್ರತಿಯನ್ನು:

1. ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಲಯ) / ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೊಡಿಗೇಹಳ್ಳಿ ಉಪ-ವಿಭಾಗ) ರವರಿಗೆ ಮಾಹಿತಿಗಾಗಿ.
2. ಕಛೇರಿ ಪ್ರತಿ.

Manjula B 30/11/2022

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

29/11/22 29/11/22 29/11/22